# ಬಲಿದಾನ

ಬ್ರ. ನಾಗರಾಜ

೧೯೨೭ ನೆಯ ಡಿಸೆಂಬರ್ ೧೮ನೆಯ ದಿನಾಂಕ. ಗೋರಖ ಪುರದ ಸೆರೆಮನೆ. ಹೊರಬಾಗಿಲಿನಲ್ಲಿ ಮಧ್ಯವಯಸ್ಕಳಾದ ತೇಜಸ್ವಿ ಯಾದ ತಾಯಿಯೊಬ್ಬಳು ಕಾಯುತ್ತಿದ್ದಾಳೆ. ಕಾತರ ಆಕೆಯ ಮುಖದಲ್ಲಿ ಮನೆ ಮಾಡಿದೆ. ತನ್ನನ್ನು ಯಾವಾಗ ಒಳಕ್ಕೆ ಕರೆಯುವರೋ ಎಂಬುದೇ ಆಕೆಯ ಕಾತರಕ್ಕೆ ಕಾರಣವಾಗಿದೆ.

ಅಷ್ಟು ಹೊತ್ತಿಗೆ ಆಕೆಯ ಗಂಡ ಅಲ್ಲಿಗೆ ಬಂದ. ಆತನಿಗೆ ಆಶ್ಚರ್ಯ ತನಗಿಂತ ಮೊದಲೇ ಹೆಂಡತಿ ಹೇಗೆ ಬಂದಳು ಎಂದು. ಆತನೂ ಕರೆಗಾಗಿ ಕಾದು ಕುಳಿತ.

ಯುವಕನೊಬ್ಬ ಬಂದ. ಅವನು ಅವರ ನೆಂಟನಲ್ಲ, ಅವರಿಬ್ಬ ರನ್ನೂ ಸೆರೆಮನೆಯೊಳಕ್ಕೆ ಬಿಡುತ್ತಾರೆ, ಆದರೆ ತಾನು ಹೇಗೆ ಒಳಕ್ಕೆ ಹೋಗುವುದು? ಅದು ಅವನ ಯೋಚನೆ. ಅಧಿಕಾರಿಗಳು ಗಂಡ ಹೆಂಡತಿಯರನ್ನು ಒಳಕ್ಕೆ ಕರೆದರು. ಯುವಕನೂ ಅವರ ಹಿಂದೆ ಹೆಜ್ಜೆ ಹಾಕಿದ. ಕಾವಲುಗಾರ ಯುವಕನನ್ನು ತಡೆದು, 'ಯಾರು ನೀನು?' ಎಂದು ಗಡುಸಿನಿಂದ ಕೇಳಿದ.

'ನನ್ನ ತಂಗಿಯ ಮಗ, ಬಿಡಪ್ಪಾ' ಎಂದಳು ಆಕೆ. ಕಾವಲುಗಾರ ಕೈ ತೆಗೆದ.

ಮೂವರೂ ಸೆರೆಮನೆಯ ಒಳಹೊಕ್ಕರು – ಮರುದಿನ ಸಾವನ್ನೆದುರಿಸಲು ಸಿದ್ಧನಾಗಿದ್ದ ಸ್ವಾತಂತ್ರ್ಯ ವೀರನೊಬ್ಬನನ್ನು ಕಾಣಲು.

ಸಂಕೋಲೆಗಳಿಂದ ಅಲಂಕೃತನಾಗಿ ಬಂದ ಆ ಧೀರ. ತನ್ನ ಜೀವನದಲ್ಲಿ ತಾಯಿಯನ್ನು ಕಾಣುವುದು, ' ಅಮ್ಮಾ' ಎಂದು ಕರೆಯುವುದು, ಅದೇ ಕೊನೆ ಸಲ. ಅವನಿಗೆ ಆ ಭಾವನೆ ಹೊಳೆ ದೊಡನೆ ದುಃಖ ಒತ್ತರಿಸಿ ಬಂತು. ಮಾತನಾಡಲಾರದೆ ನಿಂತ, ಕೆನ್ನೆಗಳ ಮೇಲೆ ಹನಿಗಳು ಉದುರಿದವು.

ದೃಢ ಧ್ವನಿಯಿಂದ ಕೇಳಿದಳು ತಾಯಿ,'ಮಗೂ, ನನ್ನ ಮಗ ದೊಡ್ಡ ಶೂರನೆಂದು ನಾನು ಎಣಿಸಿದ್ದೆ. ಅವನ ಹೆಸರು ಕೇಳಿದರೇನೇ ಬ್ರಿಟಿಷ್ ಸರ್ಕಾರ ನಡಗುತ್ತದೆ ಎಂದು ಭಾವಿಸಿದ್ದೆ. ಅವನು ಮರಣಕ್ಕೆ ಅಂಜುವನೆಂದು ನಾನು ಭಾವಿಸಿರಲಿಲ್ಲ. ಅಳುತ್ತಾ ಸಾಯುವದಿದ್ದರೆ ಇಂತಹ ಕಾರ್ಯಗಳಿಗೆ ಏಕಪ್ಪಾ ಕೈಹಾಕಿದೆ?'

ಆಗ ಆ ಸ್ವಾತಂತ್ರ್ಯ ವೀರ, 'ಅಮ್ಮಾ, ಇದು ಅಂಜಿಕೆಯ ಕಣ್ಣೀರಲ್ಲ! ತನಗಿಂತ ಎತ್ತರವಾಗಿ ಬೆಳೆದು ನಿಂತ ಮಗ ಗಲ್ಲಿಗೆ ಹೋಗುವಾಗ, ಆಶೀರ್ವಾದ ಮಾಡುತ್ತಿರುವ ಶ್ರೇಷ್ಠ ತಾಯಿಯ ಬಸಿರಲ್ಲಿ ನನಗೆ ಜನ್ಮ ಕೊಟ್ಟ ಆ ದೇವರಿಗೆ ಕೃತಜ್ಞತೆಯ ದ್ಯೋತಕ ಇದು. ದೇವರಲ್ಲಿ ನಾನಿಷ್ಟೇ ಬೇಡಿಕೊಳ್ಳುವುದು, ಮತ್ತೊಮ್ಮೆ ನಿನ್ನ ಮಗನಾಗಿಯೇ ಹುಟ್ಟಿ ಈ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಬೇಕು. ಅಮ್ಮ, ನನಗನ್ನಿಸುತ್ತದೆ, ಈ ದೇಶದ ಎಲ್ಲಾ ಮನೆಗಳಲ್ಲಿ ನಿನ್ನಂತಹ ತಾಯಂದಿರೇ ಇದ್ದಿದ್ದರೆ ನನ್ನಂತಹ ಮಕ್ಕಳಿಗೆ ಜನ್ಮ ಕೊಡುತ್ತಿದ್ದರಲ್ಲವೇ? ಇಂತಹ ಹೃದಯದ ತಾಯಿ ಮತ್ತು ದೇಶಭಕ್ತ ಮಕ್ಕಳು ಮನೆಮನೆಯಲ್ಲಿ ಇದ್ದರೆ ಬ್ರಿಟಿಷರು ಇಲ್ಲಿ ತಳವೂರಲು ಸಾಧ್ಯವಾಗುತ್ತಿರಲ್ಲಿಲ್ಲ! ಅಲ್ಲವೇ?'

ತಾಯಿ ಮಗನ ಮಾತನ್ನು ಗಮನಿಸುತ್ತಿದ್ದ ಜೈಲಿನ ಅಧಿಕಾರಿಗಳು ಆ ತಾಯಿಯ ಸ್ಥೈರ್ಯವನ್ನು ಹಾಗೂ ವೀರಪುತ್ರನ ದೇಶಭಕ್ತಿಯನ್ನು ಕಂಡು ಅವಾಕ್ಕಾದರು.

ಅಂತಿಮ ಭೇಟಿ ಮುಗಿಯಿತು.

ಮರುದಿನ ಬೆಳಗ್ಗೆ ಆ ಸ್ವಾತಂತ್ರ್ಯ ವೀರ ಮುಂದಾಗಿ ಎದ್ದು ಸ್ನಾನ, ಸಂಧ್ಯಾವಂದನಾದಿಗಳನ್ನು ಮಾಡಿದ. ತಾಯಿಗೆ ಕೊನೆಯ ಪತ್ರ ಬರೆದು ಮುಗಿಸಿದ. ಸಮಾಧಾನ ಚಿತ್ತನಾಗಿ ಮರಣಕ್ಕಾಗಿ ಕಾಯುತ್ತಾ ಕುಳಿತ. ಸೆರೆಮನೆಯ ಅಧಿಕಾರಿಗಳು ಬಂದರು. ಅವನ ಸಂಕೋಲೆಗಳನ್ನು ತೆಗೆದು ಸೆರೆಮನೆಯ ಕೊಠಡಿಯಿಂದ ಸಾವಿನ ದವಡೆಗೆ ಕರೆದೊಯ್ದರು.

ಅವನ ನಿಶ್ಚಿಂತ ಭಾವ, ಧೀರ ನಡಿಗೆ ಕಂಡು ಅಧಿಕಾರಿಗಳೇ ಬೆರಗಾದರು. ಆ ವೀರ ನೇಣುಗಂಬದತ್ತ ನಡೆಯುತ್ತಾ, 'ವಂದೇ ಮಾತರಂ' 'ಭಾರತಮಾತಾಕೀ ಜೈ' ಎಂದು ಜಯಕಾರ ಮಾಡಿದ. ಬ್ರಿಟಿಷ್ ಸಾಮ್ರಾಜ್ಯ ನಾಶವಾಗಲಿ ಎಂದು ಘೋಷಿಸಿದ. ಅನಂತರ ಉಚ್ಚ ಸ್ವರದಲ್ಲಿ ವಿಶ್ವಾನಿ ದೇವ ಸವಿತಃ ದುರಿತಾನಿ ಮೊದಲಾದ ಪ್ರಾರ್ಥನಾ ಮಂತ್ರಗಳನ್ನು ಪಠಿಸುತ್ತಾ ಮರಣವನ್ನಪ್ಪಿದ.

ಅವನು ನೇಣುಗಂಬವನ್ನೇರುತ್ತಿರುವಾಗ ಸೆರೆಮನೆಯ ಸುತ್ತಲೂ ಬಲವಾದ ಕಾವಲಿತ್ತು. ಅವನ ಪ್ರಾಣ ಹೋದನಂತರ ಅಧಿಕಾರಿಗಳು ದೇಹವನ್ನು ಹೊರಕ್ಕೆ ತಂದರು. ತಂದೆ ತಾಯಿ ಮಾತ್ರವಲ್ಲ. ನೂರಾರು ಜನ ಕಣ್ಣೀರು ಸುರಿಸುತ್ತಾ ಕಾದಿದ್ದರು. ಗೋರಖಪುರದ ಜನತೆ ಭಾರತದ ಆ ವೀರಪುತ್ರನ ಶವಕ್ಕೆ ವೀರೋಚಿತವಾಗಿ ಶೃಂಗಾರ ಮಾಡಿ ಹೂಮಳೆಗರೆಯುತ್ತಾ ಮೆರವಣಿಗೆ ಮಾಡಿ ಅಂತ್ಯಕ್ರಿಯೆಗಳನ್ನು ನಡೆಸಿತು.

ಅವನೇ ತಾಯ್ನಾಡಿನ ಮುಕ್ತಿಗಾಗಿ ತಮ್ಮ ಪ್ರಾಣವನ್ನೇ ಅರ್ಪಣೆ ಮಾಡಿದ ಗಂಡುಗಲಿ ದೇಶಭಕ್ತ ತರುಣರಲ್ಲಿ ಅಗ್ರೇಸರ ನಾಗಿದ್ದ ರಾಮಪ್ರಸಾದ್ ಬಿಸ್ಮಿಲ್. ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರನಾಗಿದ್ದ ಅವನು ಗಲ್ಲು ಶಿಕ್ಷೆಗೆ ಗುರಿಯಾಗಿದ್ದನು.

ಹೀಗೆ ನಾಡು ಸ್ವತಂತ್ರವಾಗುವ ಕನಸನ್ನು ಕಂಡು, ಆ ಕನಸನ್ನು ನನಸು ಮಾಡಲು ಆತ್ಮಾರ್ಪಣೆ ಮಾಡಿದ ಹುತಾತ್ಮರ ಸಾಲಿನಲ್ಲಿ ಸೇರಿಹೋದ ರಾಮಪ್ರಸಾದ್ ಬಿಸ್ಮಿಲ್.

ಕಡೆಗಾಲದ ಅವನ ಪ್ರಾರ್ಥನೆ ಇದು:

**'ಸಹಸ್ರ ಬಾರಿ ದೇಶದ ಹಿತಕ್ಕಾಗಿ ಸಾವನ್ನು ಅಪ್ಪಬೇಕಾಗಿ ಬಂದರೂ ನಾನು ಅದನ್ನು ಲಕ್ಷಿಸೆನು. ಹೇ ದೇವ, ನೂರು ಬಾರಿ ಭಾರತದಲ್ಲಿ ಜನ್ಮನೀಡು. ಆದರೆ ಪ್ರತಿ ಬಾರಿಯೂ ದೇಶಸೇವೆ ಮಾಡುತ್ತ ಪ್ರಾಣ ಅರ್ಪಿಸುವಂತೆ ಕರುಣಿಸು'**

**ಆಧಾರ:** *ಭಾರತ ಭಾರತಿ ಪುಸ್ತಕ ಸಂಪದ*